ಗೃಹರಕ್ಷಕ ದಳ ನಾಗರೀಕ ರಕ್ಷಣೆ ಇಲಾಖೆಯಲ್ಲಿ ಅನುಕಂಪದ ನೇಮಕಾತಿ

2414 - ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಬಂದಿಖಾನೆ, ಗೃಹರಕ್ಷಕ ದಳ, ಸೈನಿಕ ಕಲ್ಯಾಣ ಹಾಗೂ ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗೃಹರಕ್ಷಕ ದಳ ಮತ್ತು ನಾಗರೀಕ ರಕ್ಷಣೆ ಇಲಾಖೆಯಲ್ಲಿ ಪ್ರಥಮ ದರ್ಜೆ ಮತ್ತು ದ್ವಿತೀಯ ದರ್ಜೆ ಗುಮಾಸ್ತರು ಎಷ್ಟು ಹುದ್ದೆಗಳು ಖಾಲಿ ಇದೆ, (ಜಿಲ್ಲಾವಾರು ಮಾಹಿತಿ ನೀಡುವುದು)?

ಆ) ಖಾಲಿ ಇದ್ದಲ್ಲಿ ಅನುಕಂಪದ ನೇಮಕಾತಿಯಲ್ಲಿ ಈ ಹುದ್ದೆಗಳಲ್ಲಿ ಭರ್ತಿ ಮಾಡಲಾಗುವುದೇ, ಹಾಗಿದ್ದಲ್ಲಿ, ಯಾವಾಗ ಭರ್ತಿ ಮಾಡಲಾಗುವುದು, ಇಲ್ಲದಿದ್ದಲ್ಲಿ ಕಾರಣಗಳೇನು (ವಿವರ ನೀಡುವುದು)?

ಶ್ರೀ ವಿ. ಸೋಮಣ್ಣ (ಬಂದಿಖಾನೆ, ಗೃಹರಕ್ಷಕ ದಳ, ಸೈನಿಕ ಕಲ್ಯಾಣ ಹಾಗೂ ಅಗ್ನಿ ಶಾಮಕ ಸೇವೆಗಳ ರಾಜ್ಯ ಸಚಿವರು) :

ಅ) ಗೃಹರಕ್ಷಕ ಮತ್ತು ನಾಗರಿಕ ರಕ್ಷಣಾ ಇಲಾಖೆಯಲ್ಲಿ ಒಟ್ಟು 10 ಪ್ರಥಮ ದರ್ಜೆ ಸಹಾಯಕರ ಹಾಗೂ 8 ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳು ಖಾಲಿ ಇರುತ್ತವೆ. ಅವುಗಳ ಜಿಲ್ಲಾವಾರು ಮಾಹಿತಿ ಈ ಕೆಳಕಂಡಂತಿದೆ.

	ಜಿಲ್ಲೆಯ ಹೆಸರು	ಪ್ರದಸ	ದ್ವಿದಸ
1.	ಬೀದರ್	1	1
2.	ಬಿಜಾಪುರ	1	-
3.	ಉತ್ತರ ಕನ್ನಡ	1	1
4.	ಗುಲ್ಬರ್ಗಾ	1	1
5.	ಹಾಸನ	1	-
6.	ಕೊಡಗು	1	-
7.	ಧಾರವಾಡ	-	1
8.	ಚಿಕ್ಕಮಗಳೂರು	-	1
9.	ಕೋಲಾರ	-	1
10.	ಶಿವಮೊಗ್ಗ	-	1
11.	ದಕ್ಷಿಣ ಕನ್ನಡ	-	1
12.	ಬೆಂಗಳೂರು ಕೇಂದ್ರ ಕಛೇರಿ	4	-
	ಒಟ್ಟು	**10**	**8**

ಆ) ಮೇಲೆ ತಿಳಿಸಿರುವ ಹುದ್ದೆಗಳಿಲ್ಲ ನೇರ ನೇಮಕಾತಿಗೆ ಸಂಬಂಧಪಟ್ಟ ಹುದ್ದೆಗಳಾಗಿವೆ ಈ ಹುದ್ದೆಗಳನ್ನು ಅನುಕಂಪದ ನೇಮಕಾತಿಯ ನಿಯಮಗಳನ್ನು ಅನುಸರಿಸಿ ಭರ್ತಿ ಮಾಡಬಹುದಾಗಿದೆ. ಅನುಕಂಪದ ನೇಮಕಾತಿ ಕೋರಿ ಯಾವುದೇ ಅರ್ಜಿಗಳು ಇಲಾಖೆಯಲ್ಲಿ ಬಾಕಿ ಇರುವುದಿಲ್ಲ.

ರಾಜ್ಯದಲ್ಲಿ ವಿದ್ಯುತ್ ಸಬ್‌ಸ್ಟೇಷನ್‌ಗಳನ್ನು ಪ್ರಾರಂಭಮಾಡುವುದು

2416 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1996-97ನೇ ಸಾಲಿನಲ್ಲಿ ಒಟ್ಟು ಎಷ್ಟು ವಿದ್ಯುತ್ ಸಬ್ ಸ್ಟೇಷನ್‌ಗಳನ್ನು ಪ್ರಾರಂಭಿಸಲು ಯೋಜಿಸಲಾಗಿತ್ತು?

ಆ) ಈಗಾಗಲೇ ಪ್ರಾರಂಭವಾಗಿರುವ ವಿದ್ಯುತ್ ಸಬ್ ಸ್ಟೇಷನ್‌ಗಳ ಸಂಖ್ಯೆ ಎಷ್ಟು?

ಇ) ಇನ್ನುಳಿದ ಸಬ್ ಸ್ಟೇಷನ್‌ಗಳನ್ನು ಪ್ರಾರಂಭಿಸದೇ ಇರಲು ಕಾರಣವೇನು?

ಈ) ಇವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ 1996-97ನೇ ಸಾಲಿನಲ್ಲಿ ಒಟ್ಟು 45 ಹೊಸ ವಿದ್ಯುತ್ ವಿತರಣಾ ಕೇಂದ್ರಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿತ್ತು.

ಆ) 1996-97ನೇ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಿದ್ದ ವಿದ್ಯುತ್ ವಿತರಣಾ ಕೇಂದ್ರಗಳ ಪೈಕಿ 12 ವಿದ್ಯುತ್ ವಿತರಣಾ ಕೇಂದ್ರಗಳನ್ನು ಹಾಗೂ ಈ ಮೊದಲೇ ಪ್ರಗತಿಯಲ್ಲಿದ್ದ 12 ವಿದ್ಯುತ್ ವಿತರಣಾ ಕೇಂದ್ರಗಳನ್ನು ಅಂದರೆ ಒಟ್ಟು 24 ವಿದ್ಯುತ್ ವಿತರಣಾ ಕೇಂದ್ರಗಳನ್ನು 1996-97ನೇ ಸಾಲಿನಲ್ಲಿ ಚಾಲನೆಗೊಳಿಸಲಾಗಿದೆ. ಈ ಸಾಲಿನಲ್ಲಿ (1997-98) 3 ವಿದ್ಯುತ್ ವಿತರಣಾ ಕೇಂದ್ರಗಳನ್ನು ಚಾಲನೆಗೊಳಿಸಲಾಗಿದೆ.

ಇ) ಹಲವಾರು ಕಾರಣಗಳಿಂದ ಉಳಿದ ವಿದ್ಯುತ್ ವಿತರಣಾ ಕೇಂದ್ರಗಳ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗಿರುತ್ತದೆ. ಮುಖ್ಯವಾಗಿ ಮಂಡಳಿಯ ಆರ್ಥಿಕ ಪರಿಸ್ಥಿತಿಯು, ಸಿಬ್ಬಂದಿ ಹಾಗೂ ಸಾಮಗ್ರಿಗಳ ಕೊರತೆ ಕಾರಣವಾಗಿದೆ. ಅಲ್ಲದೇ ವಿದ್ಯುತ್ ವಿತರಣಾ ಕೇಂದ್ರಗಳಿಗೆ ಬೇಕಾಗುವ ಸ್ಥಳವನ್ನು ಪಡೆಯುವಲ್ಲಿ ಜಮೀನಿನ ಮಾಲೀಕರಿಂದ ಆಗುವ ತಕರಾರು, ವಿದ್ಯುತ್ ವಿತರಣಾ ಕೇಂದ್ರಗಳಿಗೆ ಸಂಬಂಧಿಸಿದಂತೆ ಪ್ರಸರಣಾ ಮಾರ್ಗಗಳನ್ನು ನಿರ್ಮಿಸುವಾಗ ಜಮೀನಿನ ಮಾಲೀಕರಿಂದ ಆಗುವ ತಕರಾರು ಅರಣ್ಯ ತೆರವು ಮಾಡುವಲ್ಲಿ ಆಗುವ ವಿಳಂಬ, ಗುತ್ತಿಗೆದಾರರಿಂದ ಆಗುವ ಕಾರ್ಯ ವಿಳಂಬ, ಮುಂತಾದ ಕಾರಣಗಳಿಂದ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗಿರುತ್ತದೆ.

ಈ) ಉಳಿದ ವಿದ್ಯುತ್ ವಿತರಣಾ ಕೇಂದ್ರಗಳ ಕಾಮಗಾರಿಗಳ ಪೈಕಿ ಬಹುತೇಕ ವಿದ್ಯುತ್ ವಿತರಣಾ ಕೇಂದ್ರಗಳ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಇವುಗಳನ್ನು ಈ ಸಾಲಿನಲ್ಲಿ (1997-98) ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.